ಮೈಸೂರಿನ ಸಂದೀಪ ಈಶಾನ್ಯ ಓದಿರುವುದು ಬಿಜಿನೆಸ್ ಮ್ಯಾನೇಜ್‌ಮೆಂಟ್. ಕೆಲಸ ಮಾಡುತ್ತಿರುವುದು ಕಿರುತೆರೆಯಲ್ಲಿ. ಕಥೆ–ಕವಿತೆ ಎಂದು ಹಚ್ಚಿಕೊಂಡವರು; ಕಿರುತೆರೆಯ ಬರವಣಿಗೆಗೆ ಸಾಹಿತ್ಯದ ಸೂಕ್ಷ್ಮಗಳನ್ನು ಬೆಸೆಯುವಲ್ಲಿ ಪ್ರಯೋಗಶೀಲರು. ಪದವಿ ವಿದ್ಯಾರ್ಥಿಯಾಗಿದ್ದಾಗಲೇ 'ಮೂನ್ ಸ್ಟ್ರೀಟ್ ಫೋರ್ಥ್ ಕ್ರಾಸ್' ಎನ್ನುವ ಕಾದಂಬರಿ ಪ್ರಕಟಣೆ. ಪ್ರಸ್ತುತ ಕಥೆಗಳ ಸಹವಾಸದಲ್ಲಿ ನಿರತರು.

ಶಾಪ ವಿಮೋಚನೆಗೊಳಿಸುವವನಂತೆ ಅವಳು ಅನುಭವಿಸುತ್ತಿದ್ದ ಮುಜುಗರದಿಂದ ಪಾರುಮಾಡಿದ್ದ.

ಶಶಾಂಕನ ಮಾತುಗಳು ಅಂಜಲಿಯನ್ನು ವಿಚಿತ್ರವಾದ ರೀತಿಯಲ್ಲಿ ಕಾಡುವುದಕ್ಕೆ ಶುರುವಿಟ್ಟುಕೊಂಡವು. ಈ ಮಾರುಕಟ್ಟೆ ಎನ್ನುವ ಅಸ್ತವ್ಯಸ್ತ ಪ್ರಪಂಚದಲ್ಲಿ ಹೆಣ್ಣು ಕೂಡ ಒಂದು ಉತ್ಪನ್ನವಷ್ಟೇ. ಇಂಡಿಯಾದಲ್ಲಿ ಅತಿಹೆಚ್ಚು ಬೇಡಿಕೆಯಿರುವುದು ಮತ್ತು ಮಾರಾಟವಾಗುವುದು ಯೋಗ ಮತ್ತು ಕಾಮ ಎಂದು ಹಿಂದೊಮ್ಮೆ ಮನೋಹರ ಹೇಳಿದ್ದು ದಿಗ್ಗನೆ ಎದೆಯಿಂದ ಹೊರಗೆ ಬಂತು. ಸುಮ್ಮನೇ ಬಾತ್‌ರೂಮಿಗೆ ಹೋದ ಅಂಜಲಿ ಒಂದು ಇಡೀ ಗೋಡೆಯನ್ನು ಆವರಿಸಿದ್ದ ಕನ್ನಡಿಯ ಎದುರು ನಿಂತವಳಿಗೆ ಒಮ್ಮೆ ತನ್ನನ್ನೇ ಪೂರ್ತಿಯಾಗಿ ನೋಡಿಕೊಳ್ಳಬೇಕು ಎನಿಸಲು ಆರಂಭವಾಯಿತು.

ಈಗಷ್ಟೇ ನಿಧಾನವಾಗಿ ಸುಕ್ಕುಗಟ್ಟಲು ಆರಂಭಿಸಿರುವ ಕೆನ್ನೆಯ ಮೇಲಿನ ನುಣುಪು, ಕಣ್ಣಿನ ಸುತ್ತಲೂ ಸದ್ದಿಲ್ಲದಂತೆ ಆವರಿಸುತ್ತಿರುವ ಕಪ್ಪು ಕಲೆಗಳು, ಒಂದು ಕಾಲಕ್ಕೆ ಬಿಗಿಯಾಗಿದ್ದು ಈಗ ನಿಧಾನವಾಗಿ ಇಳಿ ಬೀಳುತ್ತಿರುವ ಮೊಲೆಗಳು, ಸಣ್ಣದಾಗಿ ನಡುಗುತ್ತಿರುವ ಕಾಲುಗಳು ಅಂಜಲಿಯನ್ನು ಹಲವು ಪ್ರಶ್ನೆಗಳ ಎದುರು ಎಳೆದು ನಿಲ್ಲಿಸಿದವು. ಒಂದು ವೇಳೆ ಇರಬಹುದಾದರೆ ಈ ಮಾರುಕಟ್ಟೆಯಲ್ಲಿ ತನ್ನ ಮೌಲ್ಯ ಎಷ್ಟಿರಬಹುದು ಎನ್ನುವ ಪ್ರಶ್ನೆಯೊಂದು ತಿವಿಯಲು ಶುರುವಿಟ್ಟುಕೊಂಡಿತು. ಹರ್ ಬ್ರೆಸ್ಟ್ಸ್ ಆರ್ ನಾಟ್ ಇನ್ ರೈಟ್ ಸೈಜ್ ಎನ್ನುವ ಶಶಾಂಕನ ಮಾತುಗಳು ಮತ್ತೊಮ್ಮೆ ಎಲ್ಲಿಂದಲೋ ಬಂದು ಸೀದಾ ಅವಳ ಕಿವಿಗಳಿಗೆ ಅಪ್ಪಳಿಸಿದವು. ಅಂಜಲಿ ತನ್ನ ಎದೆಯನ್ನೊಮ್ಮೆ ಮುಟ್ಟಿ ನೋಡಿಕೊಂಡಳು. ಹೆಣ್ಣಿನ ಅಂಗಾಂಗದ ಮೌಲ್ಯಮಾಪನ ಮಾಡುವ ಅಳತೆಗೋಲೊಂದು ಗಂಡಿನ ಕೈಗೆ ಸಿಕ್ಕು ಅದೆಷ್ಟು ಶತಮಾನಗಳಾಗಿರಬೇಕು ಎನ್ನುವ ಪ್ರಶ್ನೆಯೊಂದು ಹಿಂದೆಯೇ ಅಟ್ಟಿಸಿಕೊಂಡು ಬರುವುದಕ್ಕೆ ಆರಂಭಿಸಿತು. ಈ ಎಲ್ಲವೂ ತಲೆಯೊಳಗೆ ತಾಂಡವವಾಡುತ್ತಿರುವಾಗಲೇ ಅಭಿಜಿತನೂ ನೆನಪಾದ.

ಅದೇ ಮೊದಲು ಅಂಜಲಿಗೆ ಅಭಿಜಿತನ ಬಗ್ಗೆ ಅದೊಂದು ಬಗೆಯ ಅಭಿಮಾನ ಎನ್ನುವುದು ಟಿಸಿಲೊಡೆಯಲು ಕಾರಣವಾಗಿತ್ತು. ಇಫ್ ಯೂ ಆರ್ ನಾಟ್ ಓಕೆ ಟು ಕಂಟಿನ್ಯೂ ವಿಥ್ ದ ಟೀಮ್, ಐ ವಿಲ್ ಹೆಲ್ಪ್ ಯೂ ಟು ಚೆಂಜ್ ದಿ ಪ್ರಾಜೆಕ್ಟ್ ಎನ್ನುವ ಸಲಹೆಯನ್ನು ಅಭಿಜಿತ ಸಂಜೆ ಕ್ಯಾಂಟಿನಲ್ಲಿ ಬಿಸಿಯಾದ ಕಾಫಿಯನ್ನು ಒಂದು ಸಣ್ಣ ಮಗುವಿನಂತೆ ಕುಡಿಯುತ್ತಾ ಕುಳಿತಿದ್ದ ಅಂಜಲಿಯ ಎದುರಿಟ್ಟಿದ್ದ. ಅಷ್ಟರಲ್ಲಾಗಲೇ ಅಂಜಲಿ ಮಾತ್ರ ತನ್ನೊಳಗೆ ತಾನು ಯಾಕಿಷ್ಟು ಮುಜುಗರ ಅನುಭವಿಸಬೇಕು ಇಷ್ಟು ಸಣ್ಣ ವಿಚಾರಕ್ಕೆ? ನಾನು ಅದಾಗಲೇ ಒಂದು ಮಗುವಿನ ತಾಯಿ, ಸೆಕ್ಸ್ ಇಸ್ ನಾಟ್ ಎಲಿಯನ್ ಫಾರ್ ಮಿ ಎಂದು ತನಗೆ ತಾನೇ ಹೇಳಿಕೊಂಡಿದ್ದಳು. ಅದಾದ ನಂತರ, 'ಇಲ್ಲ, ಅಭಿಜಿತ್ ನಾನು ಈ ಪ್ರಾಜೆಕ್ಟ್‌ನಲ್ಲೇ ಮುಂದುವರಿತೀನಿ. ನನಗೆ ಐಡಿಯಾ ಪ್ರಾಸೆಸ್ ಜೊತೆಗೆ, ಸ್ಕ್ರಿಪ್ಟ್, ಶೂಟ್‌ನಲ್ಲಿ ಭಾಗಿಯಾಗುವುದಕ್ಕೂ ಇಷ್ಟ. ಹೋಪ್ ಯೂ ಕ್ಯಾನ್ ಟೇಕ್ ಮಿ ಟು ಶೂಟ್' ಎಂದಳು. ಅಂಜಲಿಯ ಮಾತುಗಳಲ್ಲಿ ಒಂದು ಬಗೆಯ ಸ್ಪಷ್ಟತೆಯಿತ್ತು.

ಅವಳ ಮಾತುಗಳನ್ನು ಕೇಳಿದ ಅಭಿಜಿತ ತಾನು ಕೇಳಬೇಕಾಗಿರುವುದಕ್ಕೆ ಇದೇ ಸರಿಯಾದ ಸಮಯ ಎನಿಸಿತು. ಆದರೂ ಧೈರ್ಯ ಸಾಲದು ಎನ್ನುವಂತೆ, ಐ ಕ್ಯಾನ್ ಟೇಕ್ ಯೂ ಟು ಶೂಟ್ ಬಟ್ ನಾನು ಕೇಳಿದಕ್ಕೆ ಉತ್ತರ ನಾಳೆ ಹೇಳಬಹುದಾ ಅಂಜಲಿ ಎಂದ. ಈಗಾಗಲೇ ಇದೇ ಮಾತನ್ನು ಸಾಕಷ್ಟು ಸಾರಿ ಕೇಳಿರುವ ಅಂಜಲಿಗೆ ಅದೊಂದು ಪ್ರಶ್ನೆ ಎದುರಾದಾಗೆಲ್ಲ ಬಾಯಿ ಕಟ್ಟಿದಂತಾಗುತ್ತಿತ್ತು. ಉತ್ತರಿಸುವುದಕ್ಕೆ ಚಡಪಡಿಸುವಂತೆ ಕಾಣುತ್ತಿದ್ದಳು. ಅವಳ ಈ ಪರಿಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳುತ್ತಿದ್ದ ಅಭಿಜಿತನೇ, ಐ ಆ್ಯಮ್ ಸಾರಿ ಎಂದು ಮಾತನ್ನು